# ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು.

**ಎಸ್.ಸಿ. ಸಂಖ್ಯೆ 238/2018**

| | | |
|---|---|---|
| ಸಾಕ್ಷಿದಾರರ ಹೆಸರು | : ಜಿ.ಓಂಕಾರಪ್ಪ | ಪಿಡಬ್ಲ್ಯೂ : 9 |
| ತಂದೆಯ / ಗಂಡನ ಹೆಸರು | : ಗೋವಿಂದಪ್ಪ | ಸಿಡಬ್ಲ್ಯೂ : 13 |
| ವಯಸ್ಸು | : 64 ವರ್ಷ | |
| ಉದ್ಯೋಗ | : ನಿವೃತ್ತ ಆರಕ್ಷಕ ನಿರೀಕ್ಷಕರು | |
| ವಾಸಸ್ಥಳ | : ಮೈಸೂರು | |

**ಸಾಕ್ಷಿಯನ್ನು ಈ ದಿನ ದಿಃ 10.01.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಮುಖ್ಯ ವಿಚಾರಣೆ ಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ

1. ನಾನು ಜೂನ್ 2017 ರಿಂದ ಜನವರಿ 2019 ರವರೆಗೆ ಮೈಸೂರಿನ ವಿದ್ಯಾರಣ್ಯಪುರಂ ಪೋಲೀಸ್ ಠಾಣೆಯಲ್ಲಿ ಪೋಲೀಸ್ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೆ.

2. ದಿಃ 08.02.2018 ರಂದು ಈ ಪ್ರಕರಣದ ಕಡತವನ್ನು ಮುಂದಿನ ತನಿಖಗಾಗಿ ಚಾ,ಸಾ. 12 ರವರಿಂದ ಹೊಂದಿಕೊಂಡು ಅಲ್ಲಿಯವರೆಗೆ ಆಗಿದ್ದ ತನಿಖೆಯ ಬಗ್ಗೆ ಪರಿಶೀಲಿಸಿ, ನಾನು ಮುಂದಿನ ತನಿಖೆ ಕೈಗೊಂಡು, ದಿಃ 08.02.2018 ರಂದು ದೂರುದಾರ ಉಮಾಪತಿ ಭಟ್ಟ ರವರನ್ನು ಠಾಣೆಗೆ ಕರೆಯಿಸಿ ಅವರಿಂದ ಮುಂದುವರಿದ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ.

3. ದಿಃ 08.02.2018 ರಂದು ನನ್ನ ಕ್ರೈಂ ಸಿಬ್ಬಂದಿಗಳಾದ ಎಎಸ್ಐ ನಾಗಣ್ಣ ಮತ್ತು ಮಂಜುನಾಥ ರವರುಗಳು ಆರೋಪಿ ಗಣಪತಿ ಭಟ್ಟ ನನ್ನು ವಶಕ್ಕೆ ಪಡೆದು ನನ್ನ ಮುಂದೆ ಮಧ್ಯಾಹ್ನ 03.45 ಕ್ಕೆ ಹಾಜರುಪಡಿಸಿದರು. ಆರೋಪಿಯನ್ನು ವಿಚಾರಣೆಗೆ ಒಳಪಡಿಸಿ ಆತನ ಸ್ವ ಇಚ್ಛಾ ಹೇಳಿಕೆಯನ್ನು ದಾಖಲಿಸಿಕೊಂಡಿರುತ್ತೇನೆ ಮತ್ತು ಆತನ ಮೇಲೆ ದಸ್ತಗಿರಿ ಕ್ರಮ ಜರುಗಿಸಿರುತ್ತೇನೆ. ಆರೋಪಿಯ ಬಳಿ ಇದ್ದ ನೋಕಿಯಾ ಮೊಬೈಲ್ ಪೋನ್ ನ್ನು ಪಂಚರ ಸಮಕ್ಷಮ ಅಮಾನತ್ತು ಪಡಿಸಿಕೊಂಡಿರುತ್ತೇನೆ. ಚಾ,ಸಾ. 2 ಮತ್ತು 3 ರವರು ಪಂಚರಾಗಿದ್ದರು. ಸದರಿ ಅಮಾನತ್ತು ಮಹಜರ್ ನ್ನು ಈಗ ನೋಡುತ್ತಿದ್ದೇನೆ. ಅದನ್ನು ಈಗಾಗಲೇ ನಿಪಿ 7 ಎಂದು ಗುರುತುಪಡಿಸಿಕೊಳ್ಳಲಾಗಿದ್ದು, ಅದರ ಮೇಲೆ ಸಾಕ್ಷಿ ಗುರುತಿಸಿದ ತನ್ನ ಸಹಿಯನ್ನು ನಿಪಿ 7(ಸಿ) ಎಂದು ಗುರುತುಪಡಿಸಿಕೊಳ್ಳಲಾಯಿತು. ಸದರಿ ಮೊಬೈಲ್ ಪೋನ್‌ನ್ನು ಈಗ ನ್ಯಾಯಾಲಯದ ಮುಂದೆ ನೋಡುತ್ತಿದ್ದೇನೆ. ಅದನ್ನು ಈಗಾಗಲೇ ಎಂ ಒ 2 ಎಂದು ಗುರುತುಪಡಿಸಿಕೊಳ್ಳಲಾಗಿದೆ. ನಂತರ ಮಾಲು ಪಟ್ಟಿಯಲ್ಲಿ ನಮೂದಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ನಂತರ ರಾತ್ರಿ 08.00 ಗಂಟೆಗೆ ನನ್ನ ಸಿಬ್ಬಂದಿಯ ಮೂಲಕ ರಿಮ್ಯಾಂಡ್ ಅರ್ಜಿಯೊಂದಿಗೆ ಆರೋಪಿಯನ್ನು ನ್ಯಾಯಾಧೀಶರ ಮುಂದೆ ಹಾಜರುಪಡಿಸಲು ಕಳುಹಿಸಿಕೊಟ್ಟಿರುತ್ತೇನೆ.

4. ದಿಃ 09.02.2018 ರಂದು ದೂರುದಾರರು ಮೃತ ಮಹಿಳೆ ಆಶಾ ಭಟ್ಟ ರವರ ಶವವನ್ನು ಗೋಕುಲಂ ಸ್ಮಶಾನದಲ್ಲಿ ಸುಟ್ಟಿದ್ದು , ಅಲ್ಲಿಂದ ಸಂಗ್ರಹಿಸಿದ ಸುಟ್ಟ ಕೆಲವು ಮೂಳೆಗಳನ್ನು ಮನೆಯಲ್ಲಿ ಇಟ್ಟಿರುವುದಾಗಿ ತಿಳಿಸಿದ ಮೇರೆಗೆ, ಪಂಚರನ್ನು ಕರೆದುಕೊಂಡು ಸದರಿಯವರ ನಿವಾಸಕ್ಕೆ ತೆರಳಿ ದೂರುದಾರರು ಹಾಜರುಪಡಿಸಿದ ಮೂಳೆಗಳನ್ನು ಪಂಚರ ಸಮಕ್ಷಮ ಅಮಾನತ್ತು ಪಡಿಸಿಕೊಂಡಿರುತ್ತೇನೆ. ಚಾಸಾ, 2 ಮತ್ತು 3 ರವರು

ಪಂಚರಾಗಿದ್ದರು. ಸದರಿ ಮೂಳೆಗಳನ್ನು ಪ್ಲಾಸ್ಟಿಕ್ ಚೀಲದಲ್ಲಿ ಹಾಕಿ , ಕಟ್ಟಿ **BHC** ಎಂಬ ಮೂರು ಇಂಗ್ಲಿಷ್ ಅಕ್ಷರದಿಂದ ಮೊಹರು ಮಾಡಿ ಅಮಾನತ್ತು ಪಡಿಸಿಕೊಂಡಿರುತ್ತೇನೆ. ಸದರಿ ಮಹಜರ್ ನ್ನು ಈಗ ನೋಡುತ್ತಿದ್ದೇನೆ. ಅದನ್ನು ಈಗಾಗಲೇ ನಿಪಿ 4 ಎಂದು ಗುರುತುಪಡಿಸಿಕೊಳ್ಳಲಾಗಿದ್ದು , ಅದರ ಮೇಲೆ ಸಾಕ್ಷಿ ಗುರುತಿಸಿದ ತನ್ನ ಸಹಿಯನ್ನು ನಿಪಿ 4(ಸಿ) ಎಂದು ಗುರುತುಪಡಿಸಿಕೊಳ್ಳಲಾಯಿತು. ನಂತರ ಮಾಲು ಪಟ್ಟಯಲ್ಲಿ ಅಳವಡಿಸಿ ನ್ಯಾಯಾಲಯಕ್ಕೆ ನಿವೇದಿಸಿಕೂಂಡಿರುತ್ತೇನೆ.

5. ದಿಃ 09.02.2018 ರಂದು ಅನುಮಾನಾಸ್ಪದ ಕೆಲವು ಮೊಬೈಲ್ ನಂಬರ್ ಗಳನ್ನು ದೂರುದಾರರು ನೀಡಿದ ಮೇರೆಗೆ ಸದರಿ ನಂಬರ್ ಗಳ ವಿಳಾಸ ಮತ್ತು ದಾಖಲಾತಿಗಳನ್ನು ಪಡೆದುಕೊಳ್ಳಲು ಪೋಲೀಸ್ ಆಯುಕ್ತರಿಗೆ ನಿವೇದಿಸಿಕೊಂಡಿರುತ್ತೇನೆ. ದೂರುದಾರರು ನೀಡಿದ್ದ ಮೊಬೈಲ್ ಫೋನ್ ನ ನಂಬರ್ **9148165844, 918762816865, 918618256379, 917829558883, 918277231783, 919964666811.**

6. ದಿಃ 12.02.2018 ರಂದು ನಾನು ದೂರುದಾರರ ಮನೆಗೆ ತೆರಳಿ ಅಲ್ಲಿ ಮೃತ ಆಶಾ ರವರು 2007 ರ ಡೈರಿಯಲ್ಲಿ ಬರೆದಿದ್ದ ಬರವಣಿಗೆಯನ್ನು, ಮಾದರಿ ಬರವಣಿಗೆಗಾಗಿ, ಆರ್ ಎಫ್ ಎಸ್ ಎಲ್ ಗೆ ಕಳುಹಿಸುವ ಸಂಬಂಧ ಸದರಿ ಡೈರಿಯನ್ನು ಪಂಚರ ಸಮಕ್ಷಮ ಅಮಾನತ್ತು ಪಡಿಸಿಕೊಂಡು, ಒಂದು ಲಕೋಟೆಯಲ್ಲಿ ಹಾಕಿ , ಮುಚ್ಚಿ, ಕಟ್ಟಿ **BHC** ಎಂಬ ಮೂರು ಇಂಗ್ಲಿಷ್ ಅಕ್ಷರದಿಂದ ಮೊಹರು ಮಾಡಿ ಅಮಾನತ್ತು ಪಡಿಸಿಕೊಂಡಿರುತ್ತೇನೆ. ಚಾ,ಸಾ. 2 ಮತ್ತು 3 ರವರು ಪಂಚರಾಗಿ ಹಾಜರಿದ್ದರು. ಸದರಿ ಮಹಜರ್ ನ್ನು ಈಗ ನೋಡುತ್ತಿದ್ದೇನೆ. ಅದನ್ನು ಈಗಾಗಲೇ ನಿಪಿ 5 ಎಂದು

ಗುರುತುಪಡಿಸಿಕೊಳ್ಳಲಾಗಿದ್ದು , ಅದರ ಮೇಲೆ ಸಾಕ್ಷಿ ಗುರುತಿಸಿದ ತನ್ನ ಸಹಿಯನ್ನು ನಿಪಿ 5(ಸಿ) ಎಂದು ಗುರುತುಪಡಿಸಿಕೊಳ್ಳಲಾಯಿತು. ನಂತರ ಠಾಣೆಗೆ ಬಂದು ಮಾಲು ಪಟ್ಟಿಯಲ್ಲಿ ನಮೂದಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಸದರಿ ಡೈರಿಯನ್ನು ಈಗ ನ್ಯಾಯಾಲಯದ ಮುಂದೆ ನೋಡುತ್ತಿದ್ದೇನೆ. ಅದನ್ನು ಈಗಾಗಲೇ ನಿಪಿ 6 ಎಂದು ಗುರುತುಪಡಿಸಿಕೊಳ್ಳಲಾಗಿದೆ.

7. ಸಾಕ್ಷಿದಾರರಾದ ರಮೇಶ್ , ಶೋಭಾ , ಅನ್ನಪೂರ್ಣ , ರಾಘವೇಂದ್ರ ಭಟ್ಟ ರವರ ಹೇಳಿಕೆಗಳನ್ನು ದಾಖಲಿಸಿಕೊಂಡಿರುತ್ತೇನೆ.

8. ಚಾ,ಸಾ. 6 ರವರು ನನ್ನ ಮುಂದೆ ನಿಪಿ 8 ರಂತೆ ಹೇಳಿಕೆಯನ್ನು ನೀಡಿರುತ್ತಾರೆ.

9. ಮೃತ ಆಶಾಳ ಮೂಳೆಗಳನ್ನು ಅಮಾನತ್ತು ಪಡಿಸಿಕೊಂಡಿದ್ದು , ಅವುಗಳನ್ನು ಈಗ ನ್ಯಾಯಾಲಯದ ಮುಂದೆ ನೋಡುತ್ತಿದ್ದೇನೆ. ಅದನ್ನು ಈಗಾಗಲೇ ಎಂ ಒ 3 ಎಂದು ಗುರುತುಪಡಿಸಿಕೊಳ್ಳಲಾದಗಿದೆ.

10. ದಿಃ 13.02.2018 ರಂದು ಮೃತ ಆಶಾ ಮರಣಹೊಂದಿದ್ದ ವಿದ್ಯಾರಣ್ಯ ಆಸ್ಪತ್ರೆಗೆ ಭೇಟಿ ನೀಡಿ , ಕೋರಿಕೆ ಪತ್ರವನ್ನು ನೀಡಿ , ಆಕೆಗೆ ಚಿಕಿತ್ಸೆ ನೀಡಿದ ಬಾಬ್ತು ದಾಖಲಾತಿಗಳು ಹಾಗೂ ವಿವರಣೆಯನ್ನು ನೀಡಬೇಕೆಂದು ಕೇಳಿರುತ್ತೇನೆ. ಆ ಸಂಧರ್ಬದಲ್ಲಿ ವೈದ್ಯರಾದ ಡಾಃ ಮೋಹನ್ ಕುಮಾರ್ ರವರ ಹೇಳಿಕೆಯನ್ನು ದಾಖಲಿಸಿಕೊಂಡಿರುತ್ತೇನೆ. ಅದೇ ದಿನ ಮೃತ ಆಶಾಳ ಚಿಕಿತ್ಸೆಯ ಬಾಬ್ತು ದಾಖಲಾತಿಗಳನ್ನು ಸದರಿ ಆಸ್ಪತ್ರೆಯಿಂದ ಪಡೆದುಕೊಂಡಿರುತ್ತೇನೆ. ನಾನು ಸದರಿ ಆಸ್ಪತ್ರೆಗೆ ನೀಡಿದ ಪತ್ರವನ್ನು ನೋಡುತ್ತಿದ್ದೇನೆ. ಅದನ್ನು ಈಗಾಗಲೇ ನಿಪಿ 9 ಎಂದು ಗುರುತುಪಡಿಸಿಕೊಳ್ಳಲಾಗಿದೆ. ಅದರ ಮೇಲೆ ಸಾಕ್ಷಿ ಗುರುತಿಸಿದ ತನ್ನ ಸಹಿಯನ್ನು ನಿಪಿ 9(ಎ) ಎಂದು ಗುರುತುಪಡಿಸಿಕೊಳ್ಳಲಾಯಿತು.

ವೈದ್ಯರಾದ ಡಾಃ ಮೋಹನ್ ಕುಮಾರ್ ರವರು ನೀಡಿದ ಪತ್ರವನ್ನು ಈಗ ನೋಡುತ್ತಿದ್ದೇನೆ. ಅದನ್ನು ಈಗಾಗಲೇ ನಿಪಿ 10 ಎಂದು ಗುರುತುಪಡಿಸಿಕೊಳ್ಳಲಾಗಿದೆ. ಮೃತ ಆಶಾಳಿಗೆ ಸಂಬಂಧಪಟ್ಟ ಸದರಿ ಆಸ್ಪತ್ರೆಯ ಕೇಸ್ ಶೀಟ್ ನೋಡುತ್ತಿದ್ದೇನೆ. ಅದನ್ನು ಈಗಾಗಲೇ ನಿಪಿ 11 ಎಂದು ಗುರುತುಪಡಿಸಿಕೊಳ್ಳಲಾಗಿದೆ.

11. ದಿಃ 13.02.2018 ರಂದು ಮೃತ ಆಶಾಳ ಶವವನ್ನು ವಿದ್ಯಾರಣ್ಯ ಆಸ್ಪತ್ರೆಯಿಂದ ಬೃಂದಾವನ ಆಸ್ಪತ್ರೆಯ ಶವಾಗಾರಕ್ಕೆ ವರ್ಗಾಯಿಸಿದ ಬಾಬ್ತು ಬೃಂದಾವನ ಆಸ್ಪತ್ರೆಯ ವೈದ್ಯರಿಂದ ವಿವರವಾದ ಮಾಹಿತಿಯನ್ನು ಪಡೆದಿರುತ್ತೇನೆ. ನಾನು ನೀಡಿದ ಪತ್ರವನ್ನು ಈಗ ನೋಡುತ್ತಿದ್ದೇನೆ. ಅದನ್ನು ಈಗಾಗಲೇ ನಿಪಿ 12 ಎಂದು ಗುರುತುಪಡಿಸಿಕೊಳ್ಳಲಾಗಿದ್ದು ಅದರ ಮೇಲೆ ಸಾಕ್ಷಿ ಗುರುತಿಸಿದ ತನ್ನ ಸಹಿಯನ್ನು ನಿಪಿ 12(ಎ) ಎಂದು ಗುರುತುಪಡಿಸಿಕೊಳ್ಳಲಾಯಿತು. ಬೃಂದಾವನ ಆಸ್ಪತ್ರೆಯ ಸಿಎಂಒ ರವರು ನೀಡಿದ ಪತ್ರವನ್ನು ನೋಡುತ್ತಿದ್ದೇನೆ. ಅದನ್ನು ಈಗಾಗಲೇ ನಿಪಿ 13 ಎಂದು ಗುರುತುಪಡಿಸಿಕೊಳ್ಳಲಾಗಿದ್ದು ಅದರ ಮೇಲೆ ಸಾಕ್ಷಿ ಗುರುತಿಸಿದ ತನ್ನ ಸಹಿಯನ್ನು ನಿಪಿ 13(ಬಿ) ಎಂದು ಗುರುತುಪಡಿಸಿಕೊಳ್ಳಲಾಯಿತು.

12. ದಿಃ 13.02.2018 ರಂದು ಗೋಕುಲಂ ಶ್ರೀ ರುದ್ರ ಅಂತ್ಯ ಸಂಸ್ಕಾರ ಚಾರಿಟಬಲ್ ಟ್ರಸ್ಟ್‌ರಲ್ಲಿಗೆ ಕೋರಿಕೆ ಪತ್ರವನ್ನು ನೀಡಿ , ಮೃತ ದೇಹವನ್ನು ಅಲ್ಲಿ ಸುಟ್ಟ ಬಗ್ಗೆ ಅಲ್ಲಿನ ಮುಖ್ಯಸ್ಥರಿಂದ ಪ್ರಮಾಣ ಪತ್ರವನ್ನು ಪಡೆದಿರುತ್ತೇನೆ. ನಾನು ನೀಡಿದ ಪತ್ರವನ್ನು ಈಗ ನೋಡುತ್ತಿದ್ದೇನೆ. ಅದನ್ನು ನಿಪಿ 14 ಎಂತಲು, ಅದರ ಮೇಲೆ ಸಾಕ್ಷಿ ಗುರುತಿಸಿದ ತನ್ನ ಸಹಿಯನ್ನು ನಿಪಿ 14(ಎ) ಎಂತಲು, ಸದರಿ ಟ್ರಸ್ಟ್ ರವರು ನೀಡಿದ ಪತ್ರವನ್ನು ಈಗ ನೋಡುತ್ತಿದ್ದೇನೆ. ಅದನ್ನು ಈಗ ನಿಪಿ 15 ಎಂದು ಗುರುತುಪಡಿಸಿಕೊಳ್ಳಲಾಯಿತು.

13. ದಿಃ 20.04.2018 ರಂದು ಚಾ,ಸಾ. 11 ರವರಿಗೆ ಪಾಸ್ ಪೋರ್ಟ ನೀಡಿ ಮೃತ ಆಶಾ ರವವರ ಬರವಣಿಗೆಯನ್ನು ಮತ್ತು ವಿವಾದಿತ ಡೆತ್ ನೋಟ್ ನ್ನು ಆರ್ ಎಫ್ ಎಸ್ ಎಲ್ ಗೆ ಕಳುಹಿಸಿಕೊಟ್ಟಿರುತ್ತೇನೆ. ನಂತರ ಸ್ವೀಕೃತಿಯನ್ನು ಅವರಿಂದ ಪಡೆದಿರುತ್ತೇನೆ.

14. ದಿಃ 30.04.2018 ರಂದು ನೋಡಲ್ ಆಫೀಸರ್ , ಬೆಂಗಳೂರಿನ ಏರ್ ಟೆಲ್, ವೂಡೋಫೋನ್ , ಜಿಯೋ , ಐಡಿಯಾ , ಬಿ ಎಸ್ ಎನ್ ಎಲ್ , ಕಛೇರಿಗಳಿಗೆ ಮೇಲೆ ಹೇಳಿದ ಮೊಬೈಲ್ ಫೋನ್ ನಂಬರ್ ಗಳ **CAS form**, **Call details**, **tower location** , 65(ಬಿ) ಸರ್ಟಿಫಿಕೇಟ್ ಗಳನ್ನು ನೀಡಲು ಮಾನ್ಯ ಪೋಲೀಸ್ ಆಯುಕ್ತರ ಕಛೇರಿಯ ಮೂಲಕ ಕಳುಹಿಸಿಕೊಟ್ಟಿರುತ್ತೇನೆ.

15. ದಿಃ 23.04.2018 ರಂದು ನ್ಯಾಯಾಲಯಕ್ಕೆ ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಿರುತ್ತೇನೆ.

16. ದಿಃ 01.06.2018 ರಂದು ಮೃತ ಆಶಾಳ ಅಮಾನತ್ತು ಪಡಿಸಿಕೊಂಡಿದ್ದ ಮೂಳೆಗಳನ್ನು ಪಿಸಿ 446 ಶಿವಕುಮಾರ್ ರವರ ಮೂಲಕ ಆರ್ ಎಫ್ ಎಸ್ ಎಲ್ ಗೆ ಕಳುಹಿಸಿರುತ್ತೇನೆ. ನಂತರ ಸ್ವೀಕೃತಿ ಪಡೆದಿರುತ್ತೇನೆ.

17. ದಿಃ 20.08.2018 ರಂದು ಆರ್ ಎಫ್ ಎಸ್ ಎಲ್ ನಿಂದ ಸುಟ್ಟ ಮೂಳೆಗಳ ಬಾಬ್ತು ವರದಿಯನ್ನು ಪಡೆದುಕೊಂಡಿರುತ್ತೇನೆ .

18. ದಿಃ 20.08.2018 ರಂದು ಮೊಬೈಲ್ ಫೋನ್ ಕಂಪನಿಗಳಿಂದ **CAS form**, **Call details**, **tower location** , 65(ಬಿ) ಸರ್ಟಿಫಿಕೇಟ್ ಗಳನ್ನು ಪಡೆದಿರುತ್ತೇನೆ.

19. ಆದ್ದರಿಂದ ಈ ಪ್ರಕರಣದಲ್ಲಿ ಸದರಿ ಮೊಬೈಲ್ ಕಂಪನಿಗಳ ನೋಟಲ್ ಆಫೀಸರ್ ಗಳನ್ನು, ಎಫ್ ಎಸ್ ಎಲ್ ವರದಿ ನೀಡಿದ ತಜ್ಞರನ್ನು ಸಾಕ್ಷಿದಾರರನ್ನಾಗಿ ಮಾಡಿಕೊಳ್ಳಬೇಕೆಂದು ಕೋರಿ ನ್ಯಾಯಾಲಯಕ್ಕೆ ಹೆಚ್ಚುವರಿ ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಿರುತ್ತೇನೆ.

20. ಮೃತ ಆಶಾಳ ಸುಟ್ಟ ಮೂಳೆಗಳ ಬಾಬ್ತು ಎಫ್ ಎಸ್ ಎಲ್ ವರದಿಯನ್ನು ಈಗ ನೋಡುತ್ತಿದ್ದೇನೆ. ಅದನ್ನು ಈಗ ನಿಪಿ 16 ಎಂತಲು, ಅದರ ಮೇಲೆ ಸಾಕ್ಷಿ ಗುರುತಿಸಿದ ತನ್ನ ಸಹಿಯನ್ನು ನಿಪಿ 16(ಎ) ಎಂದು ಗುರುತುಪಡಿಸಿಕೊಳ್ಳಲಾಯಿತು.

21. ನಾನು ದಸ್ತಗಿರಿ ಮಾಡಿದ ಆರೋಪಿಯನ್ನು ಇಂದು ನ್ಯಾಯಾಲಯದ ಮುಂದೆ ನೋಡುತ್ತಿದ್ದೇನೆ.

ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ

22. ಮೃತ ಆಶಾ ಮೈಸೂರಿನಲ್ಲಿ ವಾಸ ಮಾಡುತ್ತಿದ್ದಳು ಎನ್ನುವುದು ಸರಿ . ಆರೋಪಿ, ಎಲೆಮನೆ ಗ್ರಾಮ, ಯಲ್ಲಾಪುರ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆಯ ನಿವಾಸಿಯಾಗಿರುತ್ತಾನೆ ಎನ್ನುವುದು ಸರಿ. ಮೈಸೂರಿನಿಂದ ಸದರಿ ಗ್ರಾಮಕ್ಕೆ 500 ಕಿ.ಮಿ. ದೂರವಾಗಬಹುದು ಎನ್ನುವುದು ಸರಿ. ಆರೋಪಿ ದೂರುದಾರರ ಮನೆಗೆ ಬರುತ್ತಿದ್ದ ಎಂದು ದೂರುದಾರರು ತಮ್ಮ ಹೇಳಿಕೆಯಲ್ಲಿ ತಿಳಿಸಿರುತ್ತಾರೆ. ಸಾಕ್ಷಿ ಸ್ವತಃ ನುಡಿಯುತ್ತಾರೆ , ದೂರುದಾರರು ಮತ್ತು ಆರೋಪಿ ಸಂಬಂಧಿಕರಾಗಿರುತ್ತಾರೆ ಎಂದು. ಆರೋಪಿ ದೂರುದಾರರ ಮನೆಗೆ ಬರುತ್ತಿದ್ದ ಎನ್ನುವ ಬಗ್ಗೆ ಯಾವುದಾದರು ದಾಖಲಾತಿಗಳನ್ನು ಪಡೆದಿರುತ್ತೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ , ಮೊಬೈಲ್ ಟವರ್ ಲೋಕೇಷನ್ , ನ್ನು

ಹಾಜರುಪಡಿಸಲಾಗಿದೆ. ದೂರುದಾರರ ಮನೆಗೆ ಸಿಸಿ ಕ್ಯಾಮರಾವನ್ನು ಅಳವಡಿಸಲಾಗಿತ್ತು ಎನ್ನುವುದು ಸರಿ . ಸಾಕ್ಷಿ ಸ್ವತಃ ನುಡಿಯುತ್ತಾರೆ , ದೂರುದಾರರು ತಮ್ಮ ಹೇಳಿಕೆಯಲ್ಲಿ ಆರೋಪಿ ಮನೆಗೆ ಬಂದಾಗ ಮೃತ ಆಶಾ ಸಿಸಿಕ್ಯಾಮರಾವನ್ನು ಆಫ್ ಮಾಡುತ್ತಿದ್ದಳು ಎಂದು.

23. ದೂರುದಾರರು ಮತ್ತು ಆರೋಪಿ ಸಂಬಂಧಿಕರಲ್ಲ ಎನ್ನುವುದು ಸರಿಯಲ್ಲ. ದೂರುದಾರರು ಮತ್ತು ಮೃತ ಆಶಾ ಬೇರೆ ಬೇರೆ ಜಾತಿಗೆ ಸೇರಿದವರಾಗಿದ್ದರು ಎನ್ನುವ ಬಗ್ಗೆ ನನಗೆ ಗೊತ್ತಿಲ್ಲ. ಆರೋಪಿ ಮತ್ತು ಮೃತ ಆಶಾ ರವರ ನಡುವೆ ನಡೆದ ಸಂಭಾಷಣೆಯನ್ನು ದಾಖಲಿಸಿ , ಹಾಜರುಪಡಿಸಿರುವುದಿಲ್ಲ. ಆರೋಪಿ ಮತ್ತು ಮೃತ ಆಶಾಳ ಮೊಬೈಲ್ ಗಳನ್ನು ಅಮಾನತ್ತು ಪಡಿಸಿಕೊಳ್ಳಲಾಗಿದೆ ಎನ್ನುವುದು ಸರಿ . ಆರೋಪಿ ಮತ್ತು ಮೃತ ಆಶಾಳ ನಡುವೆ ಯಾವುದೇ ರೀತಿಯ ಸಂಭಾಷಣೆ ನಡೆದಿರುವುದೇ ಇಲ್ಲ ಎನ್ನುವುದು ಸರಿಯಲ್ಲ.

24. ದೂರುದಾರರು ಮೃತ ಆಶಾಳ ಡೆತ್ ನೋಟ್ ನ್ನು ಆಕೆ ಮೃತ ಪಟ್ಟ 3-4 ದಿನಗಳ ನಂತರದಲ್ಲಿ ಠಾಣೆಗೆ ತಂದು ಹಾಜರುಪಡಿಸಿದ್ದ ಎನ್ನುವುದು ಸರಿ . ಮೃತ ಆಶಾ ಸಾಯುವ ಹಿಂದಿನ ದಿನ ಆಕೆ ಹೊಟ್ಟೆ ನೋವು, ವಾಂತಿ , ಬೇದಿಯಿಂದ ನರಳುತ್ತಿದ್ದಳು ಎಂದು ಆಕೆಯ ಗಂಡನೇ ಆಸ್ಪತ್ರೆಗೆ ಸೇರಿಸಿದ್ದ ಎಂದು ತಿಳಿದುಬಂದಿರುತ್ತದೆ ಎನ್ನುವುದು ಸರಿ. ಈ ಬಗ್ಗೆ ಅಲ್ಲಿಯ ವೈದ್ಯರಾದ ಡಾಃ ಮೋಹನ್ ಕುಮಾರ್ ರವರ ಹೇಳಿಕೆಯನ್ನು ಪಡೆದಿರುತ್ತೇನೆ ಎನ್ನುವುದು ಸರಿ . ಮೃತ ಆಶಾ ಲೋ ಬಿ ಪಿ ಯಿಂದ ಮೃತ ಪಟ್ಟಿರುತ್ತಾಳೆ ಎಂದು ತಮ್ಮ ವರದಿ / ಪತ್ರದಲ್ಲಿ ವೈದ್ಯರು ತಿಳಿಸಿರುತ್ತಾರೆ ಎನ್ನುವುದು ಸರಿ . ದೂರುದಾರರೊಂದಿಗೆ ಶಾಮೀಲಾಗಿ ದೂರುದಾರನನ್ನು ರಕ್ಷಿಸುವ ಸಲುವಾಗಿ ಈ

ಆರೋಪಿಯ ವಿರುದ್ಧ ಸುಳ್ಳು ದೋಷಾರೋಪಣೆ ಪಟ್ಟಯನ್ನು ನಾನು ಸಲ್ಲಿಸಿರುತ್ತೇನೆ ಎನ್ನುವುದು ಸರಿಯಲ್ಲ.

**25.** ಮೃತ ಆಶಾ ಮೃತ ಪಟ್ಟ ಒಂದು ವಾರದ ನಂತರ ಆಕೆಯ ಗಂಡ ಆಕೆಯನ್ನು ಸುಟ್ಟ ನಂತರ ತೆಗೆದುಕೊಂಡು ಬಂದಿದ್ದ ಮೂಳೆಗಳನ್ನು ಮನೆಯಲ್ಲಿ ಇಟ್ಟಿದ್ದೆ ಎಂದು ಹೇಳಿ ನನ್ನ ಮುಂದೆ ಹಾಜರುಪಡಿಸಿದ ಎನ್ನುವುದು ಸರಿ . ಸದರಿ ಮೂಳೆಗಳು ಮೃತ ಆಶಾಳ ಮೂಳೆಗಳಲ್ಲ ಎನ್ನುವುದು ನನಗೆ ಗೊತ್ತಿಲ್ಲ. ಆರೋಪಿಗೂ, ಮೃತ ಆಶಾಳಿಗೂ ಯಾವುದೇ ರೀತಿಯ ಸಂಬಂಧ ಇಲ್ಲ ಎನ್ನುವುದು ಸರಿಯಲ್ಲ. ಮೃತ ಆಶಾ ಮತ್ತು ಆರೋಪಿಯ ಮೊಬೈಲ್ ಗಳ ನಡುವೆ ಫೋನ್ ಮಾಡಿದ ಬಗ್ಗೆ , ಮೆಸೇಜ್ ಕಳುಹಿಸಿರುವ ಬಗ್ಗೆ ಕಂಡು ಬಂದಿರುತ್ತದೆ. ಆದರೆ ಯಾವ ರೀತಿಯ ಮೆಸೇಜ್ ಗಳನ್ನು ಕಳುಹಿಸಿಕೊಂಡಿದ್ದರು ಎನ್ನುವುದು ಕಂಡು ಬಂದಿರುವುದಿಲ್ಲ.

**26.** ಮೃತ ಆಶಾ ಸಾಯುವ ಮೊದಲು ಒಂದು ವರ್ಷದಿಂದ ಆಕೆ ಮತ್ತು ಗಂಡನ ನಡುವಿನ ಸಂಬಂಧ ಚೆನ್ನಾಗಿರಲಿಲ್ಲ ಎನ್ನುವ ಬಗ್ಗೆ ನನಗೆ ಗೊತ್ತಿಲ್ಲ. ಅವರ ಗಲಾಟೆಯ ಸಂಬಂಧ ಪಂಚಾಯ್ತಿ ನಡೆದಿರುವ ಬಗ್ಗೆ ನಾನು ತನಿಖೆಯಲ್ಲಿ ತಿಳಿದುಕೂಂಡಿರುವುದಿಲ್ಲ. ಮೃತ ಆಶಾಳ ಸಾವಿಗೆ ಆಕೆಯ ಗಂಡನೇ ಕಾರಣ ಎನ್ನುವುದು ಸರಿಯಲ್ಲ. ಆರೋಪಿಯ ವಿರುದ್ಧ ಸುಳ್ಳು ದೋಷಾರೋಪಣೆ ಪಟ್ಟಿ ಸಲ್ಲಿಸಿರುತ್ತೇನೆ ಎನ್ನುವುದು ಸರಿಯಲ್ಲ.

**<u>ಮರು ವಿಚಾರಣೆ : ಇಲ್ಲ</u>**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೇ ಸ ಇ ಎ ಒ**

**3ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು**
**ಮೈಸೂರು.**